<u>ದಿನಾಂಕ**15-10-2025**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>
<u>**ಪಾಟೀ ಸವಾಲುಃ 2** ಮತ್ತು **3** ನೇ ಪ್ರತಿವಾದಿ ಪರ ವಕೀಲರಾದ ಶ್ರೀ **BAG** ರವರಿಂದಃ</u>

ದಿಃ 25.09.01995 ರಂದು ನಾನು ದಾವಾ ಸ್ವತ್ತನ್ನು ಖರೀದಿ ಮಾಡಿದ್ದೇನೆ. ದಾವಾ ಸ್ವತ್ತು ಕೃಷಿಯೇತರ ಉದ್ದೇಶಕ್ಕಾಗಿ 1997 ರಲ್ಲಿ ಭೂ-ಪರಿವರ್ತನೆಯಾಗಿದೆ. ನಾನು ಭೂ-ಪರಿವರ್ತನೆ ಮಾಡಿಸಿದ್ದೇನೆ. ನಿಪಿ-12 ರಲ್ಲಿ ರಾಮಣ್ಣ ಮಲ್ಲಾರಿ ಮಾತಾಡಿ ಮತ್ತು ಇತರರು ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲಿಗೆ ನನಗೆ ಕ್ರಯಕ್ಕೆ ಕೊಟ್ಟವರು ಭೂ-ಪರಿವರ್ತನೆಗಾಗಿ ಅರ್ಜಿ ಸಲ್ಲಿಸಿದ್ದರು ನಂತರ ಅಂದರೆ ನಾನು ಖರೀದಿ ಮಾಡಿದ ನಂತರ ಭೂ-ಪರಿವರ್ತನೆಯ ಕ್ರಮಗಳನ್ನು ನಾನು ಮುಂದುವರೆಯಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-12 ರಲ್ಲಿ ತೋರಿಸಿರುವ ರಾಮಣ್ಣ, ಅಮೃತ , ಮಾರುತಿ , ಅಶೋಕ, ಮಲ್ಲಪ್ಪ, ಶಿವಾಜಿ ಮತ್ತು ಬಾಳು ಮಾಲೀಕರು ಎಂದರೆ ಸರಿ. ಸದರಿಯವರು ದಿಃ9.3.1995 ರಂದು ಅರ್ಜಿಕೊಟ್ಟಿದ್ದರು ಎಂದರೆ ಸರಿ. ದಿಃ18.07.1995 ರಂದು NA ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿಃ 21.06.1997 ರಲ್ಲಿ ಆಗಿದೆ ಎಂದು ನುಡಿಯುತ್ತಾರೆ. ದಿಃ 21.06.1997 ರಂದು NA ಆಗಿಲ್ಲ ಎಂದರೆ ಸರಿಯಲ್ಲ. ತಾರೀಖು ತಪ್ಪಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಕೃಷಿ ಜಮೀನು ಎಂದು ತೋರಿಸಿ ಮಾರಾಟ ಮಾಡಿದ್ದಾರೆ. ನಿಪಿ-12 ರಲ್ಲಿ ತೋರಿಸಲಾಗಿರುವ ಮಾಲೀಕರಿಗೆ ಇನ್ನೂ ಸಹೋದರರು ಮತ್ತು ಸಹೋದರಿಯರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಹೋದರರು ಮತ್ತು ಸಹೋದರಿಯರ ಬಗ್ಗೆ ವಿಚಾರಿಸಿದಾಗ ಬೇರೆ ಯಾರು ಇಲ್ಲ ಎಂದು ಹೇಳಿರುತ್ತಾರೆ. ನಾನು ವಿಚಾರಣೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಮೃತ ಪಟ್ಟಿದ್ದಾರೆ ಎಂದರೆ ಸರಿ. 3ನೇ ಪ್ರತಿವಾದಿಗೆ ಸಹೋದರ - ಸಹೋದರಿಯರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. 2 ಮತ್ತು 3ನೇ ಪ್ರತಿವಾದಿ ತಮ್ಮ ಹೆಸರನ್ನು ಕಂದಾಯ ದಾಖಲೆಗಳಲ್ಲಿ ನಮೂದಿಸಿಕೊಂಡ ಕಾರಣ 2022 ರಲ್ಲಿ ಈ ಕೇಸು ಹಾಕಿದ್ದೇನೆ. AC ನ್ಯಾಯಾಲಯದಲ್ಲಿ

ತೀರ್ಪು 2 ಮತ್ತು 3ನೇ ಪ್ರತಿವಾದಿಗಳ ಪರ ಬಂದಿದೆ ಎಂದರೆ ಸರಿ. ನಂತರ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದೆ ಎಂದರೆ ಸರಿ. ಸದರಿ ಅಪೀಲು ಸಹಾ ವಜಾ ಆಗಿದೆ ಎಂದರೆ ಸರಿ. ಜಿಲ್ಲಾಧಿಕಾರಿಗಳ ಆದೇಶದ ಮೇಲೆ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಮಾನ್ಯ ಉಚ್ಚ-ನ್ಯಾಯಾಲಯದಲ್ಲಿ writ ಹಾಕಿದ್ದೇನೆ. ನಾನು 2025 ರಲ್ಲಿ writ ಹಾಕಿದ್ದೇನೆ. ಕಂದಾಯ ನ್ಯಾಯಾಲಯದ ಆದೇಶದಂತೆ ನನ್ನ ಹೆಸರನ್ನು ತೆಗೆದು 2 ಮತ್ತು 3ನೇ ಪ್ರತಿವಾದಿಗಳ ಹೆಸರನ್ನು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ.

ಜಿಲ್ಲಾಧಿಕಾರಿಗಳ ಮುಂದೆ NA ಮಾಡಲು ಅರ್ಜಿ ಕೊಟ್ಟಾಗ ನಿಪಿ-12 ರಲ್ಲಿ ತೋರಿಸಿರುವ ವ್ಯಕ್ತಿಗಳು ಕಚೇರಿಗೆ ಹೋಗಿ NA ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು NA ಮಾಡಿಸಿದ್ದೇನೆ ಎಂದು ತೋರಿಸಲು ದಾಖಲೆ ಇದೆ ಎಂದರೆ ಸಾಕ್ಷಿ ನಾನೇ ಹಣ ಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಹಣ ಪಾವತಿ ಮಾಡಿದ್ದಕ್ಕೆ ರಶೀದಿ ಮನೆಯಲ್ಲಿ ಇರಬಹುದು. ನಿಪಿ-12ರಲ್ಲಿ ಕಂಡು ಬರುವ ವ್ಯಕ್ತಿಗಳು ಜಿಲ್ಲಾಧಿಕಾರಿಗಳ ಕಚೇರಿಗೆ ಬಂದಾಗ ಅವರಿಗೆ ಪುಸಲಾಯಿಸಿ ಸಹಿಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. NA ಆಗುವ ಪೂರ್ವದಲ್ಲಿ ಮತ್ತು ನಂತರ ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತು ಖಾಲಿ ಇದ್ದು ನನ್ನ ಸ್ವಾ ಧೀನದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಈಗ ಜೋಳ ಮತ್ತು ಹುರುಳಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿಗೆ ಎಂದೂ ಹೋಗಿಲ್ಲ ಮತ್ತು ನನ್ನ ಸ್ವಾಧೀನದಲ್ಲಿ ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರ ಹೊರತುಪಡಿಸಿ ಸ್ವಾಧೀನ ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. 2022 ರಿಂದ ನನ್ನ ಹೆಸರು ತೆಗೆದಿದ್ದಾರೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಸಹಿ/-

1 **ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಬೆಳಗಾವಿ.**

ಒ ಎಸ್ ನಂ:**1146/2022**

**ಪಿಡಬ್ಲೂ : 1**